ಇನ್ನೂ ಬಂದಿರುವುದಿಲ್ಲ. ಆದಲ್ಲದೇ ಕಳೆದ ೧೦ ವರ್ಷಗಳಿಂದ ಈ ಒಂದು ಕಟ್ಟಡದ ಸೌಲಭ್ಯವನ್ನು ಒದಗಿಸಬೇಕೆಂದು ವಿದ್ಯಾರ್ಥಿಗಳ ಹಾಗೂ ಪೋಷಕರ ಒಂದು ಕೋರಿಕೆಯಾಗಿದೆ. ಇದರ ಬಗ್ಗೆ ಇನ್ನೂ ಕೂಡಾ ತೀವ್ರತರವಾದ ಕಾರ್ಯಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಆದ್ದರಿಂದ ದಯವಿಟ್ಟು ಶೀಘ್ರವಾಗಿ ಈ ಕಟ್ಟಡದ ಕಾರ್ಯವನ್ನು ಮುಗಿಸುತ್ತೀರಾ ?

ಶ್ರೀ ಬಿ. ಶಿವಣ್ಣ.—ಅಲ್ಲಿ ಎರಡು ಫ್ರೀ ಮೆಟ್ರಿಕ್ ಹಾಸ್ಟೆಲ್‌ಗಳು ಹಾಗೂ ಒಂದು ಪೋಸ್ಟ್ ಮೆಟ್ರಿಕ್ ಹಾಸ್ಟೆಲ್ ಇವೆ. ಈಗ ಅಲ್ಲಿ ಕಾಲೇಜು ಹಾಸ್ಟೆಲು ಬೇಕೆಂದು ಹೇಳುತ್ತಿದ್ದಾರೆ. ಜಿಲ್ಲಾ ಪರಿಷತ್ತು ಮತ್ತು ಸರ್ಕಾರದ ವತಿಯಿಂದ ಈ ಬಗ್ಗೆ ೨ ಲಕ್ಷ ಖರ್ಚು ಮಾಡಿ ಕಟ್ಟಡವನ್ನು ಕಟ್ಟಿಸಲಾಗುತ್ತಿದೆ ಈಗ ಅದು ಲಿಂಟಲ್ ಲೆವೆಲ್‌ವರೆಗೆ ಬಂದಿದೆ. ಅದನ್ನು ಲ್ಯಾಂಡ್ ಆರ್ಮಿಯವರಿಗೆ ಕೊಟ್ಟು ಈ ಕಟ್ಟಡವನ್ನು ತ್ವರಿತವಾಗಿ ಮುಗಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಅದಕ್ಕೆ ಯಾವ ತೊಂದರೆಯೂ ಇಲ್ಲ.

ಶ್ರೀ ಎಂ. ಎಸ್. ಆತ್ಮಾನಂದ.—ಸರ್ಕಾರದ ವತಿಯಿಂದ ಕೋರಿ ಜಿಲ್ಲಾಪರಿಷತ್ತಿನಿಂದ ಕಾಗದ ಬಂದಿದೆ. ನಾನೂ ಕೂಡಾ ಈ ಬಗ್ಗೆ ಮನವಿ ಕೊಟ್ಟಿದ್ದೇನೆ. ಅಲ್ಲಿ ೧೨-೧೫ ವರ್ಷಗಳಿಂದ ಹಾಸ್ಟೆಲು ಸೌಲಭ್ಯ ಇಲ್ಲದೆ ಪರಿಶಿಷ್ಟ ಜಾತಿ ಮಕ್ಕಳಿಗೆ ಅನಾನುಕೂಲವಾಗಿದೆ. ಹಾಸ್ಟೆಲ್ ಸೌಲಭ್ಯ ಮಾಡ್ಯಾದಲ್ಲಿ ಆಗಬೇಕಾದ್ದರಿಂದ ತಾವು ಹಣವನ್ನು ಕೊಟ್ಟು ಮುಗಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ ಶಿವಣ್ಣ —ಆಗಬಹುದು. ಅಧ್ಯಕ್ಷರೇ ಚುಕ್ಕೆ ಪ್ರಶ್ನೆ ೪೦೩ಕ್ಕೆ ಜಿಲ್ಲಾವಾರು ಮಾಹಿತಿ ಬರಬೇಕಾಗಿರುವುದರಿಂದ ಪೇಳಿ ಕೇಳಿ ಪತ್ರ ಬರೆದಿದ್ದೇನೆ.

ಅಧ್ಯಕ್ಷರು.—ಆಯಿತಂ. ಈ ಪ್ರಶ್ನೆಯನ್ನು ಮುಂದೂಡಿದ್ದೇನೆ.

ಬಿಜಾಪುರ ಜಿಲ್ಲೆಯಲ್ಲಿ ಅಕ್ರಮವಾಗಿ ಗ್ರಾನೈಟ್ ಕಲ್ಲನ್ನು ತೆಗೆಯುವುದು

೩೯೮. ಶ್ರೀ ಸಿ. ಎಸ್. ನಾಡಗೌಡ (ಮುದ್ದೆಬಿಹಾಳ್).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರದ ವಿವಿಧ ಭಾಗಗಳಲ್ಲಿ ಹೆಚ್ಚಾಗಿ ಗ್ರಾನೈಟ್‌ನ ಅಕ್ರಮ ಕಲ್ಲು ಗಣಿಗಾರಿಕೆ ಮತ್ತು ಮಿಣಜಗಿ ತಾಲ್ಲೂಕು ಮುದ್ದೆಬಿಹಾಳ್‌ನಲ್ಲಿ ನೆಲಹಾಸು ಕಲ್ಲು ಗಣಿಗಾರಿಕೆಯು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದರೆ, ಅದನ್ನು ತಡೆಯಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಇ) ೧೯೮೮-೮೯ನೇ ಸಾಲಿನಲ್ಲಿ ರಾಜಧನ ರೂಪದಲ್ಲಿ ವಸೂಲು ಮಾಡಿರುವ ರಾಜಸ್ವ ಎಷ್ಟು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಬಂದಿದೆ.

ಆ) ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮಾಡುವವರ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ೮೦ದ್ದಮೆಗಳನ್ನು ಹೂಡಲಾಗಿದೆ.

ಇ) ರೂ. ೨೬,೧೩,೯೪೬-೦೦

ಶ್ರೀ ಸಿ.ಎಸ್. ನಾಡಗೌಡ–ಅಧ್ಯಕ್ಷರೇ, ನಮ್ಮಲ್ಲಿ ಗಣಿಗಳು ಏನಿವೆ, ಅದರಲ್ಲಿಯೂ ನಮ್ಮ ರಾಜ್ಯದಲ್ಲಿ ಈ ಗ್ರಾನೈಟ್ ಎಂಬುದು ರಾಜ್ಯದ ವಜ್ರ ಎಂದರೆ ತಪ್ಪಾಗಲಾರದು. ಇಂತಹ ಬೆಲೆ ಬಾಳುವ ಗ್ರಾನೈಟ್‌ನ್ನು ಮನಸ್ಸೋಚ್ಛೆ ಹಲವಾರು ಜನ ಕ್ವಾರಿ ಮಾಡುತ್ತಿದ್ದಾರೆ. ಹಾಗೂ ಕಾಯ್ದೆಗೆ ವಿರುದ್ಧವಾಗಿ ಸಾಗಾಣಿಕೆ ಮಾಡುತ್ತಿದ್ದಾರೆ. ನಮ್ಮ ಕಾಯ್ದೆಯಲ್ಲೂ ಕೂಡಾ ಕೆಲವು ಲೋಪದೋಷಗಳಿರುವುದರಿಂದ ಅವರ ಮೇಲೆ ಯಾವುದೇ ರೀತಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ಶಕ್ತಿ ಹೀನರಾಗಿದ್ದೇವೆ ಅದಕ್ಕೋಸ್ಕರ ಈ ಬಗ್ಗೆ ಇರುವ ಕಾಯ್ದೆಯನ್ನು ತಿದ್ದುಪಡಿ ಮಾಡುತ್ತೀರಾ ? ಇವತ್ತು ಏನು ಲೀಸ್ ಕೊಡುವ ವ್ಯವಸ್ಥೆ ಇದೆ, ಅದನ್ನು ಸುಲಭ ರೀತಿಯಲ್ಲಿ ಜಾರಿಗೆ ತಂದು ಸರಿಯಾದ ರೀತಿಯಲ್ಲಿ ಸರ್ಕಾರಕ್ಕೆ ಆದಾಯ ಬರುವಂತೆ ನಿಯಮಾವಳಿ ಮಾಡಿ ಸರ್ಕಾರಕ್ಕೆ ಬರುವ ರಾಯಲ್ಟಿ

ಯನ್ನು ಸರಿ ಪ್ರಮಾಣದಲ್ಲಿ ಪಡೆದುಕೊಳ್ಳುವಂತಾದರೆ ಕನಿಷ್ಟ ಪಕ್ಷ ೫೦೦ ಕೋಟಿ ರೂಪಾಯಿಗಳ ಆದಾಯ ಇವತ್ತಿನದಿವಸ ನಮ್ಮ ಗಣಿಗಳಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಬರುತ್ತದೆ. ಆದ್ದರಿಂದ ತಾವು ಈ ಬಗ್ಗೆ ವಿವರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೇ, ನಾನು ಮೊದಲೇ ಹೇಳಿದೆ. ಮೈಸೂರು ಪ್ರಾಂತ್ಯದ ಕೆಲವು ಜನ ಪಟ್ಟೆದಾರರು ಹಾಗೂ ಇನ್ನಿತರ ಪಟ್ಟೆದಾರರು ಹೈಕೋರ್ಟಿಗೆ ರಿಟ್ ದೋಗಿ ರೂಲ್–ಸಿ ಏನಿದೆ, ಅದನು ಇಂಪ್ಲಿಮೆಂಟ್ ಮಾಡದಹಾಗೆ ತಡೆ ಆಜ್ಞೆ ತಂದಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ಸ್ವಲ್ಪ ತೊಂದರೆಯಾಗಿದೆ. ನಾವು ಈ ಬಗ್ಗೆ ಹೊಸ ರೂಪದಲ್ಲಿ ಬಿಲ್ ತರುತ್ತಿದ್ದೇವೆ. ಈ ಬಗ್ಗೆ ಹೊಸ ಪಾಲಿಸಿ ಮಾಡಬೇಕೆಂದು ನಿರ್ಣಯ ಮಾಡಿದ್ದೇವೆ. ಅದರಲ್ಲಿ ತಮ್ಮ ಸಲಹೆಯನ್ನು ಸಹ ಅಳವಡಿಸಿಕೊಳ್ಳುತ್ತೇವೆ.

ಶ್ರೀ ಸಿ. ಎಸ್. ನಾಡಗೌಡ.—ತಾವು ಈ ಚೆಕ್‌ಪೋಸ್ಟ್‌ಗಳನ್ನು ಕ್ವಾರಿ ಹಂತದಲ್ಲಿ ಮಾಡುತ್ತೀರೋ ಅಥವಾ ಫಿನಿಷ್ಡ್ ಗೂಡ್ಸ್ ಹೋಗುವ ಹಂತದಲ್ಲಿ ಮಾಡುತ್ತೀರೋ ಎಂಬ ಪ್ರಶ್ನೆ ಕೇಳುತ್ತೇನೆ ?

ಶ್ರೀ ಬಿ ಶಿವಣ್ಣ.—ಮಾನ್ಯ ಸದಸ್ಯರು ಬಿಜಾಪುರದಲ್ಲಿನ ಇಲ್ಲೀಗಲ್ ಕ್ವಾರಿ ಬಗ್ಗೆ ಪ್ರಶ್ನೆ ಕೇಳಿದ್ದು ಆ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದೇನೆ. ಆ ಪ್ರಕಾರವಾಗಿ ಕೇಸ್‌ಗಳನ್ನು ಸಹಾ ಹಾಕಿದ್ದೇವೆ, ಇನ್ನು ಟೆಕ್‌ಪೋಸ್ಟ್‌ಗಳ ಬಗ್ಗೆ ಏನು ಹೇಳಿದ್ದಾರೆ. ಆ ಬಗ್ಗೆ ಪರಿಶೀಲನೆ ಮಾಡಿ ನಾವು ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಅಕ್ರಮವಾಗಿ ಕಲ್ಲು ಗಣಿಗಾರಿಕೆ ಮಾಡುವವರ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದೆ ಎಂದು ಹೇಳಿದ್ದೀರಿ ಇಂತಹವರನ್ನು ಏನಾದರೂ ಬಂಧಿಸಿದ್ದೀರಾ ಹೇಗೆ ಎಂಬುದನ್ನು ತಿಳಿಸಬೇಕು. ಇಂತಹವರ ಮೇಲೆ ತಾವು ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆಂದಿದ್ದೀರಿ. ಹಾಗಿದ್ದರೆ ಇವರುಗಳು ಯಾರು ಎಂದು ಹೇಳಬೇಕು. ಇವರು ಯಾವ ಯಾವ ತಾಲ್ಲೂಕಿಗೆ ಸೇರಿದವರಂ ಎಂಬುದರ ಬಗ್ಗೆ ವಿವರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ.—ಇಲ್ಲಿ ಪ್ರಶ್ನೆ ಇರುವುದು ಬಿಜಾಪುರಕ್ಕೆ ಸಂಬಂಧಪಟ್ಟ ಹಾಗೆ ಮಾತ್ರ. ಮಾನ್ಯ ಸದಸ್ಯರು ಈ ಇಲಾಖೆಯ ಬೇಡಿಕೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದರೆ ನಾನು ಎಲ್ಲ ವಿವರವನ್ನೂ ಒದಗಿಸಿಕೊಡುತ್ತೇನೆ.

ಶ್ರೀ ಸಿ. ಎಸ್. ನಾಡಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ವಾಟಾಳ್‌ನಾಗರಾಜ್ ಅವರು ಹೇಳಿದಹಾಗೆ ನಮ್ಮಲ್ಲಿಯೂ ಕೂಡಾ there are many white-collared men doing this business. ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅಂಜಬಾರದು ಎಂಬ ಅಪೇಕ್ಷೆಯಿಂದ ಈ ಸಭೆಯಲ್ಲಿ ನಾನು ಪ್ರಶ್ನೆ ಕೇಳುತ್ತೇನೆ. ತಾವು ಈಗಿನ ಕಾನೂನಿಗೆ ತಿದ್ದುಪಡಿ ತಂದು ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆರ್ಹರಾಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ.—ಅಧ್ಯಕ್ಷರೇ, ಈ ಬಗ್ಗೆ ಏನಾದರೂ ದೂರುಗಳು ಅವರ ಹತ್ತಿರ ಇದ್ದರೆ ಕೊಡಲಿ. ನಾನು ಆ ಬಗ್ಗೆ ಎನ್‌ಕ್ವಯರಿ ಮಾಡಿಸುತ್ತೇನೆ.

ಶ್ರೀ ಜಿ. ರಾಜೂಗೌಡ —ಇವತ್ತು ಈ ಕಪ್ಪುಶಿಲೆ ಭೂಗರ್ಭ ಸಂಪತ್ತು ಆಗಿದೆ. ಭೂಮಿಯಲ್ಲಿ ಸಿಗುವ ಧನ, ಕನಕ ವಜ್ರ, ವೈಢೂರ್ಯವೆಲ್ಲಾ ಸರ್ಕಾರದ ಸಂಪತ್ತು ಎಂದು ಘೋಷಿಸಿರುವಂತೆ ಈ ಕಪ್ಪು ಶಿಲೆಯೂ ಸಹ ಸರ್ಕಾರದ ಸಂಪತ್ತು ಹಾಗೂ ಇದು ಸರ್ಕಾರಕ್ಕೆ ಸೇರಿದ್ದು ಎಂದು ತಿದ್ದುಪಡಿಯನ್ನು ತರುತ್ತೀರಾ ?

ಶ್ರೀ ಬಿ. ಶಿವಣ್ಣ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಬೀಡಿ ಕಾರ್ಮಿಕರ ಅಭಿವೃದ್ಧಿ ಯೋಜನೆ

೩೮೮. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ ರೇಷ್ಮೆ ವ್ಯವಸಾಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ರಾಜ್ಯದಲ್ಲಿ ಇರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು ?